



# ಎಲ್ಲರ ನೋವನು ಬಲ್ಲವನಾದರೆ...

ಬಾಲಿವುಡ್‌ನ ಜನಪ್ರಿಯ ದಂಪತಿ ಜಾವೇದ್ ಅಖ್ತರ್ ಮತ್ತು ಶಬಾನಾ ಆಜ್ಮಿ ಪ್ರತಿಭೆಯ ಕಾರಣಕ್ಕಷ್ಟೇ ಅಲ್ಲ, ಪ್ರಗತಿಪರ ವಿಚಾರಗಳಿಂದಲೂ ಗಮನಸೆಳೆದವರು. ಪತಿ ತನ್ನ ಕಾವ್ಯದ ಮೂಲಕ ಮನಸಲ್ಲಿ ಅಚ್ಚಳಿಯದಂಥ ಬಿಂಬಗಳನ್ನು ಕಟ್ಟಿಕೊಟ್ಟರೆ, ಪತ್ನಿ ನಟನೆಯಲ್ಲಿಯೇ ಕಾವ್ಯದ ಆತ್ಮವನ್ನು ಹುಡುಕಿ ಸಾಕ್ಷಾತ್ಕರಿಸಿಕೊಂಡವರು. ಇವರ ಪದ್ಯಪ್ರೇಮ ಇಂದು ನಿನ್ನೆಯದಲ್ಲ; ಜಾವೇದ್ ತಂದೆ ಜಾನ್ ನಿಸಾರ್ ಅಖ್ತರ್ ಮತ್ತು ಶಬಾನಾ ತಂದೆ ಕೈಫಿ ಆಜ್ಮಿ ಇಬ್ಬರೂ ಹೆಸರಾಂತ ಕವಿಗಳು. ಈ ಕಾವ್ಯವಾಹಿನಿ ಜಾವೇದ್ ಮತ್ತು ಶಬಾನಾ ಅವರ ಮಕ್ಕಳಾದ ಜೋಯಾ ಮತ್ತು ಫರ್ಹಾನ್ ಅವರಲ್ಲಿಯೂ ಪ್ರವಹಿಸುತ್ತಿದೆಯಂತೆ. ಜಾವೇದ್ ದಂಪತಿ ಈಗ ಜಾನ್ ನಿಸಾರ್ ಅಖ್ತರ್ ಮತ್ತು ಕೈಫಿ ಆಜ್ಮಿ ಅವರ ಆಯ್ದ ಕವಿತೆಗಳ ಸಂಗ್ರಹದ ಹೊಸ ಕೃತಿಯ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಸದ್ಯವೇ ಬಿಡುಗಡೆಗೊಳ್ಳಲಿರುವ ಈ ಪುಸ್ತಕದ ಜೊತೆಗೆ ಹಲವು ವಿಷಯಗಳ ಕುರಿತು ಜಾವೇದ್ ಅಖ್ತರ್ ಅವರನ್ನು ‘ಸುಧಾ’ಕ್ಕಾಗಿ **ಪದ್ಮನಾಭ ಭಟ್** ಮಾತನಾಡಿಸಿದ್ದಾರೆ.